# ವಿತ್ತೀಯ ಕಾರ್ಯ ನೀತಿ ಸಂಸ್ಥೆ

**ವಾರ್ಷಿಕ ವರದಿ– 2014 (01-01-2014 to 31-12-2014)**

ಪರಿವಿಡಿ


ಅಧ್ಯಾಯ–1 ............ 3

**1. ಪೀಠಿಕೆ** ............ 3

**1.1 ದೃಷ್ಟಿ** ............ 3

**1.2 ಗುರಿ** ............ 3

**1.3 ಧ್ಯೇಯಗಳು** ............ 3

**1.4 ವಿಕಾಸಂನ ಕೇಂದ್ರಗಳು:** ............ 4

**1.5 ಚಟುವಟಿಕೆಗಳ ವ್ಯಾಪ್ತಿ** ............ 4

**1.6 ಆಡಳಿತ ಪರಿಷತ್ತು** ............ 5

**1.7 ವಿತ್ತೀಯ ಕಾರ್ಯನೀತಿ ಸಂಸ್ಥೆಯ ಮೂಲಸೌಕರ್ಯ:** ............ 5

**1.8 ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ:** ............ 5

**1.9 ಗ್ರಂಥಾಲಯ:** ............ 6

ಅಧ್ಯಾಯ – 2 ............ 7

**2. ಬೌದ್ಧಿಕ ಕಾರ್ಯಗಳು** ............ 7

2.1 **2014 ನೇ ಸಾಲಿನಲ್ಲಿ ವಿತ್ತೀಯ ಕಾರ್ಯ ನೀತಿ ಸಂಸ್ಥೆಯು ನಡೆಸಿದ ತರಬೇತಿಗಳು.** ............ 7

**2.2 ಸಂಶೋಧನೆ** ............ 7

2.3 ಸಲಹೆಗಳ ಬಗ್ಗೆ: ............ 9

2.4 ಇತರೆ: ............ 9

**2.5 ಹಣಕಾಸು:** ............ 9

**2.6 ವೆಚ್ಚ:** (ಡಿಸೆಂಬರ್ 2014 ರವರೆಗೆ) ............ 10

ಅಧ್ಯಾಯ– 3 ............ 11

ಅಧ್ಯಾಯ–4 ............ 12

4.1 ಮೊದಲ ಭಾಗ : ಇಲ್ಲ ............ 12

4.2 ದ್ವಿತೀಯ ಭಾಗ : ಇಲ್ಲ ............ 12

**4.3 ತೃತೀಯ ಭಾಗ: ಇಲ್ಲ** ............ 12

**4.4 ನಾಲ್ಕನೇ ಭಾಗ:** ........ 12

ಅಧ್ಯಾಯ–5 ........ 13

**5 ಆಡಳಿತಾತ್ಮಕ ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿನ ಸಾಧನೆಗಳು** ........ 13

**5.1. ಮಾನವ ಸಂಪನ್ಮೂಲ.** ........ 13

**5.2 ಖಾಲಿ ಹುದ್ದೆಗಳು ಮತ್ತು ನಿವೃತ್ತಿಗಳು:** ........ 14

**5.3 ಹೊರಗುತ್ತಿಗೆ ಸಿಬ್ಬಂದಿ:** ........ 14

**5.4 ಅಧಿಕಾರಿಗಳು ಭಾಗವಹಿಸಿದ ತರಬೇತಿಗಳು:** ........ 15

**5.5 ತಂತ್ರಾಂಶ:** ........ 16

5.6 **ಆಡಳಿತ ತಪಾಸಣೆ:** ........ 16

ಅಧ್ಯಾಯ–6 ........ **Error! Bookmark not defined.**

**6.1 ವಿಧಾನ ಸಭೆ/ ವಿಧಾನ ಪರಿಷತ್ತು ಪ್ರಶ್ನೆಗಳು:** ........ **Error! Bookmark not defined.**

**6.2 ಮೊಕದ್ದಮೆಗಳು:** ........ **Error! Bookmark not defined.**

**6.3 ಲೆಕ್ಕ ಪರಿಶೋಧನೆ:** ........ **Error! Bookmark not defined.**

## ಅಧ್ಯಾಯ-1

### 1. ಪೀಠಿಕೆ

ಸರ್ಕಾರವು 2007ರಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಿತು. ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಿರುವುದು, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ ಆಕ್ಟ್-2002 (ಕ.ವಿ.ಹೊ.ಅ.) ಅಕ್ಷರಶಃ ಮತ್ತು ಭಾಗಶಃ ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ಸಾಂಸ್ಥೀಕರಣಗೊಳಿಸುವ ಸಂಬಂಧದಲ್ಲಿ ಸರ್ಕಾರ ಹೊಂದಿರುವ ಬದ್ಧತೆಯನ್ನು ಮನಗಾಣಿಸುತ್ತದೆ. ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಈ ಮುಂದಿನ ಕಾರ್ಯಗಳಲ್ಲಿ ಕರ್ನಾಟಕ ಸರ್ಕಾರಕ್ಕೆ ನೆರವಾಗುವುದಕ್ಕಾಗಿ ಸ್ಥಾಪಿಸಲಾಗಿರುತ್ತದೆ, ಅವುಗಳೆಂದರೆ;

- ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ "ತಿಳಿವಳಿಕೆಯುಳ್ಳ" ನಿರ್ಣಯ ಕೈಗೊಳ್ಳುವಿಕೆಯನ್ನು ವೃದ್ಧಿಸಲು;
- ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯು, ಆರ್ಥಿಕ ನಿರ್ವಹಣೆಯಲ್ಲಿ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಮೂಡಿಸುವಂಥ ಸುಸ್ಥಿರ ಮತ್ತು ಪಾರದರ್ಶಕ ತತ್ವಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವುದು;
- ಸಂಬಂಧಪಟ್ಟ ಸಂಸ್ಥೆಗಳ ಸಾಮರ್ಥ್ಯವನ್ನು ನಿರಂತರವಾಗಿ ಮೇಲ್ದರ್ಜೆಗೇರಿಸುವ ಮೂಲಕ ವಿತ್ತೀಯ ಸರಿಪಡಿಸುವಿಕೆಯ ಕ್ರಮವನ್ನು ಸುಸ್ಥಿರಗೊಳಿಸುವುದು.

ವಿತ್ತೀಯ ನೀತಿ ವಿಶ್ಲೇಷಣಾ ಕೋಶವನ್ನು 2005 ರಲ್ಲಿ ರಚಿಸಲಾಯಿತು. ಈ ಕೋಶವನ್ನು, 2004-08 ರವರೆಗೆ ಜಾರಿಯಲ್ಲಿದ್ದ USAID ನೆರವಿನ 'ರಾಜ್ಯ ವಿತ್ತೀಯ ಸುಧಾರಣೆಗಳ' ಯೋಜನೆಯಡಿಯಲ್ಲಿ ಸ್ಥಾಪಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ ಆಇ 22 ಸಾವಿಯೋ 2013 ದಿನಾಂಕ 03/10/2013 ರಲ್ಲಿ ವಿತ್ತೀಯ ನೀತಿ ವಿಶ್ಲೇಷಣಾ ಕೋಶವನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯೊಂದಿಗೆ ವಿಲೀನಗೊಳಿಸಲಾಗಿದೆ.
ವಿತ್ತೀಯ ಕಾರ್ಯನೀತಿ ಸಂಸ್ಥೆಯ ಪರಿಷ್ಕೃತ ಸಾಂಸ್ಥಿಕ ರಚನೆಯನ್ನು ಗೌರ್ನಿಂಗ್ ಕೌನ್ಸಿಲ್‌ನ ಛೇರ್ಮನ್‌ರವರು ಅನುಮೋದಿಸಿದ್ದು ಇದನ್ನು ವಿಕಾಸಂ/ಸಿ/11/2013-14 ದಿನಾಂಕ 19/07/2014 ಮತ್ತು 20/11/2014 ರ ಪತ್ರಗಳಲ್ಲಿ ಸರ್ಕಾರಕ್ಕೆ ಅಗತ್ಯ ಆದೇಶ ಹೊರಡಿಸುವ ಸಲುವಾಗಿ ಕಳುಹಿಸಿದ್ದು, ಆದೇಶವನ್ನು ನಿರೀಕ್ಷಿಸಿದೆ.

### 1.1 ದೃಷ್ಟಿ

ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ತೊಡಗಿರುವ ಮಾನವ ಬಂಡವಾಳದ ಗುಣಮಟ್ಟವನ್ನು ಹೆಚ್ಚಿಸುವುದು. ಇದರ ಪ್ರತಿಫಲವಾಗಿ, ಅವರ ದಕ್ಷತೆ ಹೆಚ್ಚಾಗಬೇಕು, ವಿವೇಕಯುತ ವಿತ್ತೀಯ ನಿಬಂಧನೆಗಳಿಗೆ ಬದ್ಧರಾಗುವ ಮತ್ತು ನಾಗರಿಕರ ಹಣಕ್ಕೆ ಮೌಲ್ಯವನ್ನು ಖಚಿತಪಡಿಸುವ ಸ್ವಭಾವವನ್ನು ವೃದ್ಧಿಸಬೇಕು.

### 1.2 ಗುರಿ

ವಿತ್ತೀಯ ಹೊಣೆಗಾರಿಕೆಯ ಪ್ರಜ್ಞೆಯನ್ನು ಮೂಡಿಸುವ ಮೂಲಕ, ಹೊಂದಿಕೆಯಾಗುವ ಕಾರ್ಯಪದ್ಧತಿಗಳನ್ನು ವ್ಯಾಪಕವಾಗಿ ಅಳವಡಿಸುವ ಮುಖಾಂತರ ಸರ್ಕಾರದ ಒಳಗಿರುವ ಮತ್ತು ಹೊರಗಿರುವ ಬಳಕೆದಾರರಿಗೆ ನ್ಯಾಯಸಮ್ಮತ ಮತ್ತು ಕೈಗೆಟಕುವ ವೆಚ್ಚದಲ್ಲಿ ತನ್ನ ಸೇವೆಗಳನ್ನು ಒದಗಿಸುವುದು ಹಾಗೂ ಈ ಮೂಲಕ ಎಲ್ಲಾ ಸರ್ಕಾರಿ ವಲಯದ ಆಡಳಿತ ಘಟಕಗಳಿಗೆ ಸಂಬಂಧಿಸಿದ ಸಮಾಲೋಚನಾ ಮತ್ತು ನಿರ್ವಹಣಾ ವಿಷಯಗಳಿಗೆ ಸಂಬಂಧಿಸಿದಂತೆ 'ಉಲ್ಲೇಖಿಸುವ ಪ್ರಥಮ ಸಂಸ್ಥೆಯಾಗುವಂತೆ ತನ್ನನ್ನು ಸ್ಥಾಪಿಸಿಕೊಳ್ಳುವುದು' ವಿತ್ತೀಯ ಕಾರ್ಯನೀತಿ ಸಂಸ್ಥೆಯ ಗುರಿಯಾಗಿದೆ.

### 1.3 ಧ್ಯೇಯಗಳು

ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಈ ಮುಂದಿನ ಧ್ಯೇಯಗಳೊಂದಿಗೆ ಸ್ಥಾಪಿಸಲಾಯಿತು;

(ಅ) ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಅಧಿಕಾರಿಗಳಿಗೆ ಅಗತ್ಯಕ್ಕೆ ತಕ್ಕಂತೆ ತರಬೇತಿಯನ್ನು ನೀಡುವುದು ಮತ್ತು ವಿತ್ತೀಯ ಜಾಗರೂಕತೆಯ ಕುರಿತು ಒತ್ತು ನೀಡುವ ಮೂಲಕ ಹಣಕಾಸು ನಿರ್ವಹಣೆ, ಕಾರ್ಯಕ್ರಮ

ಅನುಷ್ಠಾನಗೊಳಿಸುವಿಕೆ, ಸಾರ್ವಜನಿಕ ವೆಚ್ಚ ಮತ್ತು ಸ್ವತ್ತಿನ ನಿರ್ವಹಣೆಗಳಂಥ ಹಲವಾರು ಅಂಶಗಳ ಕುರಿತು ಉಪಯುಕ್ತ ಸಂಶೋಧನಾ ಸಾಮಗ್ರಿಗಳನ್ನು ಒದಗಿಸುವುದು.

(ಆ) ಬೇಡಿಕೆ ಮೇಲೆ ಮತ್ತು ಸ್ವಪ್ರೇರಣೆಯಿಂದ ಸರ್ಕಾರಿ ಮತ್ತು ಸಾರ್ವಜನಿಕ ವಲಯ ಸಂಸ್ಥೆಗಳಿಗಾಗಿ ತುರ್ತು ಮತ್ತು ದೀರ್ಘಾವಧಿಯ ಸಂಶೋಧನೆ ಮತ್ತು ಅಧ್ಯಯನಗಳನ್ನು ಕೈಗೊಳ್ಳುವುದು.

(ಇ) ಕಾರ್ಯನೀತಿ ವಿಶ್ಲೇಷಣೆ, ಬಂಡವಾಳ ನಿರ್ವಹಣೆ, ಅಪಾಯ ನಿರ್ವಹಣೆ ಮತ್ತು ಕಾರ್ಯನಿರ್ವಹಣಾ ಮೇಲ್ವಿಚಾರಣಾ ಪದ್ಧತಿಗಳಿಗೆ ಸಂಬಂಧಿಸಿದ ಪರಾಮರ್ಶನ ಕೈಪಿಡಿಗಳು, ಪ್ರಮಾಣ ಫಲಕಗಳು, ಸಾಧನಗಳು ಮತ್ತು ಮಾನಕಗಳು ಸುಲಭವಾಗಿ ದೊರೆಯುವಂತೆ ಉತ್ಪಾದಿಸುವುದು ಮತ್ತು ಅವುಗಳನ್ನು ಸಾಂಸ್ಥೀಕರಿಸುವುದು.

(ಈ) ಸರ್ಕಾರಿ ಕಾರ್ಯಾಚರಣೆಗಳಲ್ಲಿನ ಉತ್ತಮ ಆರ್ಥಿಕ ನಿರ್ವಹಣೆಗೆ ಸಂಬಂಧಿಸಿದ ಇನ್ನೂ ಒಳ್ಳೆಯ ಕಾರ್ಯಪದ್ಧತಿಗಳನ್ನು ಕಂಡುಹಿಡಿಯುವುದು, ದಾಖಲೀಕರಿಸುವುದು ಮತ್ತು ಪ್ರಸಾರ ಮಾಡುವುದು ಹಾಗೂ ಖರ್ಚು ಮಾಡುವ ಹಣಕ್ಕೆ ಮೌಲ್ಯವನ್ನು ಖಾತರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಇಲಾಖೆಗಳು, ಸಾರ್ವಜನಿಕ ವಲಯ ಉದ್ಯಮಗಳು ಮತ್ತು ಎಲ್ಲಾ ಸರ್ಕಾರಿ ಸಂಸ್ಥೆಗಳಿಗೆ ನೆರವು ನೀಡುವುದು.

(ಉ) ನಿರಂತರವಾಗಿ ತರಬೇತಿ ಮತ್ತು ಸಂಶೋಧನೆಗಳು ನಡೆಯುವಂತೆ ಅನುಕೂಲ ಕಲ್ಪಿಸುವುದಕ್ಕಾಗಿ ಪರಿಣಾಮಕಾರಿಯಾಗಿರುವ ಅಗತ್ಯ ಭೌತಿಕ ಮೂಲಸೌಕರ್ಯ ಮತ್ತು ನಿರ್ವಹಣಾ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ನಿರ್ವಹಿಸುವುದು.

**1.4 ವಿಕಾಸಂನ ಕೇಂದ್ರಗಳು:**

ಸಾಂಪ್ರದಾಯಕ ತರಬೇತಿ ಅಥವಾ ಸಂಶೋಧನಾ ಸಂಸ್ಥೆಯಂತಲ್ಲದೆ ಸಾರ್ವಜನಿಕ ಸಂಪನ್ಮೂಲದ ಬಳಕೆಗೆ ಸಂಬಂಧಿಸಿದ ವಿನ್ಯಾಸ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವೂ ಸೇರಿದಂತೆ ಸಮಸ್ಯೆಗಳಿಗೆ ಸಮಗ್ರ ಪರಿಹಾರಗಳನ್ನು ಒದಗಿಸುವುದು, ವಿತ್ತೀಯ ಕಾರ್ಯನೀತಿ ಸಂಸ್ಥೆಯ ನೈಜವಾದ ಉದ್ದೇಶವಾಗಿದೆ. ಸಂಸ್ಥೆಯು ಹಣಕಾಸು ಇಲಾಖೆಯ ಆಡಳಿತ ನಿಯಂತ್ರಣದ ಅಡಿಯಲ್ಲಿ ಒಂದು ನಿರ್ದೇಶನಾಲಯದಂತೆ ಕಾರ್ಯನಿರ್ವಹಿಸುತ್ತದೆ. ಒಂದು ತರಬೇತಿ ಉದ್ಯಮವಾಗಿ ವಿತ್ತೀಯ ಕಾರ್ಯನೀತಿಯ ಚಟುವಟಿಕೆಗಳನ್ನು ಐದು ಕೇಂದ್ರಗಳ ಮೂಲಕ ನಿರ್ವಹಿಸಲಾಗುವುದು:

(ಅ) ಸಾರ್ವಜನಿಕ ಸಂಪನ್ಮೂಲ ನಿರ್ವಹಣೆ
(ಆ) ಸಾರ್ವಜನಿಕ ವೆಚ್ಚ ನಿರ್ವಹಣೆ
(ಇ) ಹಣಕಾಸು ಉತ್ತರದಾಯಿತ್ವ ಮತ್ತು ವಿಕೇಂದ್ರೀಕರಣ
(ಈ) ಯೋಜನೆ, ಮಾಹಿತಿ ತಂತ್ರಜ್ಞಾನ ಮತ್ತು ಸಾಂಖ್ಯಿಕ ಕೇಂದ್ರ ಮತ್ತು
(ಉ) ಯೋಜನಾ ನಿರ್ವಹಣೆ.

**1.5 ಚಟುವಟಿಕೆಗಳ ವ್ಯಾಪ್ತಿ**

ವಿತ್ತೀಯ ಕಾರ್ಯನೀತಿ ಸಂಸ್ಥೆಯ ಚಟುವಟಿಕೆಗಳು ಮತ್ತು ಸೇವೆಗಳು, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002ರ 4ನೇ ಪ್ರಕರಣದ ಉಪಬಂಧಗಳ ಮೇರೆಗಿನ ವಿತ್ತೀಯ ನಿರ್ವಹಣೆಯ ಹದಿನೇಳು ತತ್ವಗಳ ಆಶಯವನ್ನು ಅಳವಡಿಸಿಕೊಳ್ಳುವುದನ್ನು ಅಪೇಕ್ಷಿಸಲಾಗಿದೆ. ಇವುಗಳನ್ನು ಕೆಳಕಾಣಿಸಿದ ನಾಲ್ಕುಡಿ ವಿಧಾನಗಳ ಮೂಲಕ ಸಾಧಿಸಲಾಗುವುದು.

(ಅ) ಅಗತ್ಯಕ್ಕೆ ತಕ್ಕಂತೆ ತರಬೇತಿ ಮತ್ತು ಹಾಗೆ ತರಬೇತಿ ಪಡೆದುಕೊಂಡವರಿಗೆ ನಿರಂತರವಾಗಿ ನೆರವು ನೀಡುವುದು.

(ಆ) ಸಾಂಪ್ರದಾಯಕ ಕ್ಷೇತ್ರಗಳು ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವಗಳು (PPPs) ಸರಕು ಮತ್ತು ಸೇವಾ ತೆರಿಗೆಗಳು (GST), ಪರಿಸರ ಅರ್ಥಶಾಸ್ತ್ರ, ಆರೋಗ್ಯ ಅರ್ಥಶಾಸ್ತ್ರ ಮೊದಲಾದ ನೂತನ ಮತ್ತು ಸವಾಲಿನ ಕ್ಷೇತ್ರಗಳಿಗೆ ಸಮಾಲೋಚನಾ ಸೇವೆ ಮತ್ತು ತರಬೇತಿಯನ್ನು ನೀಡುವುದು.

(ಇ) ದತ್ತಾಂಶ ಬ್ಯಾಂಕನ್ನು ಸೃಜಿಸುವುದು ಮತ್ತು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಇಲಾಖೆಗಳಿಗೆ ನೆರವು ನೀಡುವುದೂ ಸೇರಿದಂತೆ ದತ್ತಾಂಶ ಕೋಶದ ನಿರ್ವಹಣೆ ಮಾಡುವುದು, ಮತ್ತು

(ಈ) ವಿತ್ತೀಯ ನಿರ್ವಹಣೆ ತತ್ವಗಳು ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ಸಲಹೆ ಮತ್ತು ನೆರವು ನೀಡುವುದು.

**1.6 ಆಡಳಿತ ಪರಿಷತ್ತು**

ಸಂಸ್ಥೆಯ ಪ್ರಕಾರ್ಯದ ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ದೇಶಕರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಆಡಳಿತ ಪರಿಷತ್ತನ್ನು ರಚಿಸಲಾಗಿದೆ.

1. ಡಾ. ಕೆ.ಪಿ.ಕೃಷ್ಣನ್, ಅಪರ ಕಾರ್ಯದರ್ಶಿಗಳು, ಭೂ ಸಂಪನ್ಮೂಲಗಳ ಇಲಾಖೆ, ಭಾರತ ಸರ್ಕಾರ,
2. ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
3. ಪ್ರಧಾನ ಕಾರ್ಯದರ್ಶಿ, ಯೋಜನೆ,
4. ಪ್ರಧಾನ ಕಾರ್ಯದರ್ಶಿ, ಕಂದಾಯ,
5. ಕಾರ್ಯದರ್ಶಿ, ಹಣಕಾಸು (ಆಯವ್ಯಯ ಮತ್ತು ಸಂಪನ್ಮೂಲಗಳು),
6. ಆಯುಕ್ತರು, ವಾಣಿಜ್ಯ ತೆರಿಗೆಗಳು,
7. ಆಯುಕ್ತರು, ಅಬಕಾರಿ ಮತ್ತು
8. ಪ್ರಧಾನ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ ಇವರು ಆಡಳಿತ ಪರಿಷತ್ತಿನ ಇತರ ಸದಸ್ಯರಾಗಿರುತ್ತಾರೆ.

**1.7 ವಿತ್ತೀಯ ಕಾರ್ಯನೀತಿ ಸಂಸ್ಥೆಯ ಮೂಲಸೌಕರ್ಯ:**

ವಿತ್ತಿಯ ಕಾರ್ಯನೀತಿ ಸಂಸ್ಥೆಯು ಆಡಳಿತ ವಿಭಾಗ ಅತಿಥಿ ಗೃಹ, ವಸತಿ ನಿಲಯ, ನಿರ್ದೇಶಕರ ವಸತಿ ಗೃಹ, ಬೋಧಕರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಹೊಂದಿದೆ. ಸಂಸ್ಥೆಯ ಅಂತರ್ಜಾಲ ತಾಣವನ್ನು ಪ್ರಾರಂಭಿಸಲಾಗಿದ್ದು ಅದನ್ನು www.fpibangalore.gov.in ನಲ್ಲಿ ನೋಡಬಹುದಾಗಿದೆ.

**1.8 ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ:**

ದಿನಾಂಕ 04/12/2013 ರಂದು ನಡೆದ TAP (Technical Advisory Panel) ಸಭೆಯಲ್ಲಿ ನೀಡಿದ ಅನುಮೋದನೆಯಂತೆ ವಿತ್ತೀಯ ಕಾರ್ಯನೀತಿ ಸಂಸ್ಥೆಯು ತರಬೇತಿ ತರಗತಿಗಳ ಉಪಯೋಗಕ್ಕಾಗಿ ಜನವರಿ 2014 ರಲ್ಲಿ ರೂ 12.91 ಲಕ್ಷಗಳ ವೆಚ್ಚದಲ್ಲಿ ಸಿಆಸುಇ (ಇ ಗವರ್ನೆನ್ಸ್) empanelled vendor ಆದ ಹೆಚ್‌ಪಿ ಸಂಸ್ಥೆಯಿಂದ 20 Core i7 ಹೈ ಎಂಡ್ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿದೆ. ಈ ಲ್ಯಾಪ್‌ಟಾಪ್‌ಗಳಲ್ಲಿ ಅಳವಡಿಸಲು ರೂ2.60 ಲಕ್ಷಗಳ ವೆಚ್ಚದಲ್ಲಿ ಸಿಆಸುಇ (ಇ ಗವರ್ನೆನ್ಸ್) empanelled vendor ಆದ ಮೆ. ಮ್ಯಾಟ್ರಿಕ್ಸ್ ಟೆಕ್ನಾಲಜೀಸ್ ಇಂಕ್ ಸಂಸ್ಥೆಯಿಂದ ಎಂಎಸ್ ಆಫೀಸ್ 2013 ಸಾಫ್ಟ್‌ವೇರ್ ಲೈಸೆನ್ಸ್‌ಗಳನ್ನು ಸಹ ಖರೀದಿಸಲಾಗಿದೆ.

a) 10-Laptops, 60-Desktop, 3-Standalone printers, 5-MFDs, 1-Colour Printer, 1-Copier (B & W), 2-DVDwriters/Multi Banner, 3- Scanner, 2-Projector, and 1-Server.

b) Software to Ms OFFICE, 70-Antivirus, 3-PDF editor, 2-Ms Project, 2-IDEA software, 2-SPSS

ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್‌ಗಳನ್ನು ಅಂದಾಜು ಮೊತ್ತ ರೂ.60.97 ಲಕ್ಷಗಳ ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಗೆ ದಿನಾಂಕ 27/09/2014 ರಂದು ನಡೆದ ಸಭೆಯಲ್ಲಿ "E-Governance Annual plan Approval Committee" ಯು ಅನುಮೋದನೆ ನೀಡಿರುತ್ತದೆ. ಇದಲ್ಲದೆ ಅಸೆಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಅಳವಡಿಸಿಕೊಳ್ಳಲು ಹಾಗೂ UTM ನಂತಹ ಉತ್ತಮ ಅಥೆಂಟಿಕೇಷನ್ ಮತ್ತು ಆಕ್ಸೆಸ್ ಕಂಟ್ರೋಲ್ ಪ್ರೊಟೋಕಾಲ್ ಹೊಂದಿರುವ ನೆಟ್‌ವರ್ಕ್ ರೋಬಸ್ಟ್ ಸೆಕ್ಯೂರಿಟಿ ಮೆಕಾನಿಸಮ್ ಅಳವಡಿಸಿಕೊಳ್ಳಲು ಮತ್ತು TAP (Technical Advisory Panel) ಸಭೆಯಲ್ಲಿ ವಿಷಯವನ್ನು ಮಂಡಿಸಲು ತಿಳಿಸಲಾಗಿತ್ತು. ದಿನಾಂಕ 15/11/2014 ರಂದು ಶ್ರೀ ಐ.ಎಸ್.ಎನ್.ಪ್ರಸಾದ್, ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ TAP (Technical Advisory Panel) ಸಭೆಯಲ್ಲಿ ಸದರಿ ಮಾಹಿತಿ ತಂತ್ರಜ್ಞಾನ ಕ್ರಿಯಾ ಯೋಜನೆಯನ್ನು ಮಂಡಿಸಲಾಯಿತು. TAP ಯು ಪ್ರಸ್ತಾವನೆಗೆ ಅನುಮತಿ ನೀಡಿದ್ದು ಡೆಸ್ಕ್ ಟಾಪ್‌ಗಳ ಬದಲಾಗಿ ತಿನ್ ಕ್ಲೈಂಟ್ಸ್‌ಗಳನ್ನು ಹಾಗೂ SPSS Software license ಗಳನ್ನು ಅಗತ್ಯತೆಗಳಿಗನುಸಾರ ಖರೀದಿಸಲು ಸೂಚಿಸಿತು. ಇಂತಹ ಮೂಲಭೂತ ಸೌಲಭ್ಯಗಳನ್ನು ನಿರ್ವಹಿಸಲು ಬಲಶಾಲಿಯಾದ ಮಾಹಿತಿ ತಂತ್ರಜ್ಞಾನ ಟೀಮ್ ರಚಿಸಲು ಹಾಗೂ ಇದನ್ನು ವಾರಂಟಿ ಅವಧಿ, AMC ಕುರಿತು ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಭಾಗಿಯನ್ನಾಗಿಸಲು ಸಹ ಸೂಚಿಸಿದೆ.

**1.9 ಗ್ರಂಥಾಲಯ:**

ವಿಕಾಸಂ ಸಂಸ್ಥೆಯ ಗ್ರಂಥಾಲಯನ್ನು 10,000 ಪುಸ್ತಕಗಳನ್ನು ಇಡುವ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇದರೊಂದಿಗೆ ಓದಲು, ದಿನಪತ್ರಿಕೆಗಳನ್ನು ಪ್ರದರ್ಶಿಸಲು, ಹೊಸ ಪುಸ್ತಕಗಳ ಪ್ರದರ್ಶನ, ಗ್ರಂಥಾಲಯ ಬಳಕೆದಾರರಿಗೆ ಸ್ಥಳ, ಪುಸ್ತಕ ಪಡೆಯುವ ಮತ್ತು ಹಿಂತಿರುಗಿಸುವ ಸ್ಥಳ, ದಸ್ತಾವೇಜು, ಛಾಯಾಪ್ರತಿ, ಮಾಧ್ಯಮ ಚಾವಣಿ (Media vault) ಡಿವಿಡಿ / ಸಿಡಿ ಆಲ್ಬಮ್ಸ್ ಮತ್ತು ದಾಸ್ತಾನು ಕೊಠಡಿ ಇತ್ಯಾದಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗಿದೆ. ಗ್ರಂಥಾಲಯವು 2837 ಶೀರ್ಷಿಕೆಗಳು, 3005 ಪುಸ್ತಕಗಳು, 4480 ವರದಿಗಳು ಮತ್ತು 317 ಶೈಕ್ಷಣಿಕ ಸಿಡಿಗಳ ಜೊತೆಗೆ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿದೆ. ಎಲ್ಲಾ ದಸ್ತಾವೇಜುಗಳನ್ನು ಎನ್‌ಐಸಿಯ ಇ–ಗ್ರಂಥಾಲಯ ತಂತ್ರಾಂಶ ಬಳಸಿ ಗಣಕೀಕೃತ ಗ್ರಂಥ ಸೂಚಿಯಲ್ಲಿ ಅಳವಡಿಸಲಾಗಿದೆ. ಓದುಗರಿಗೆ ಒಪಿಎಸಿ (Online Public Access Catalogue OPAC) ಸೌಲಭ್ಯಗಳನ್ನು ಒದಗಿಸಲಾಗಿದೆ. ಹೊಸದಾಗಿ ಗ್ರಂಥಾಲಯಕ್ಕೆ ಸೇರ್ಪಡೆಯಾಗಿರುವ ಗ್ರಂಥಗಳು ಮತ್ತು ಕಾರ್ಯ ಪತ್ರಗಳನ್ನು ಸಾಪ್ತಾಹಿಕವಾಗಿ ಪ್ರದರ್ಶಿಸಲಾಗುವುದು ಮತ್ತು ಪ್ರದರ್ಶಿಸಿದ ದಿನಾಂಕದ ನಂತರ ಅವುಗಳನ್ನು ಎರವಲು ಪಡೆಯಬಹುದಾಗಿದೆ. ಗ್ರಂಥಾಲಯದ ಎಲ್ಲಾ ಪುಸ್ತಕಗಳನ್ನು ಮತ್ತು ಆಸ್ತಿಗಳನ್ನು ಬಾರ್ ಕೋಡಿಂಗ್ ಮಾಡಿ ಗಣಕೀಕರಿಸಲಾಗಿದೆ.

## ಅಧ್ಯಾಯ – 2

**2. ಬೌದ್ಧಿಕ ಕಾರ್ಯಗಳು**

2.1 **2014 ನೇ ಸಾಲಿನಲ್ಲಿ ವಿತ್ತೀಯ ಕಾರ್ಯ ನೀತಿ ಸಂಸ್ಥೆಯು ನಡೆಸಿದ ತರಬೇತಿಗಳು.**

ವಿಕಾಸಂ ಗ್ರಾಹಕೀಯ ತರಬೇತಿ ಕಾರ್ಯಕ್ರಮವನ್ನು ಮತ್ತು ತರಬೇತಿ ಹೊಂದಿದವರಿಗೆ ಮಾರ್ಗದರ್ಶನವನ್ನು ಮುಂದುವರೆಸುತ್ತಾ ಹಿಂದಿನ ಹಾಗೂ ವರದಿಯ ಸಾಲಿನಲ್ಲಿ ಕೆಳಕಾಣಿಸಿದಂತೆ ತರಬೇತಿ ನೀಡಿದೆ:

| ಕ್ರ.ಸಂ | ಕ್ಯಾಲೆಂಡರ್ ವರ್ಷ | ನಡೆಸಲಾದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ | ತರಬೇತಿ ಹೊಂದಿದ ಅಧಿಕಾರಿಗಳ ಸಂಖ್ಯೆ |
|---|---|---|---|
| 1 | 2013 | 45 | 455 |
| 2 | 2014 | 59 | 2452 |

**2.2 ಸಂಶೋಧನೆ**

1) ಸಾಲ ನಿರ್ವಹಣೆ ಹಾಗೂ ಆರ್ಥಿಕ ವಿಶ್ಲೇಷಣಾ ಕೋಶ (DMFA):

ಈ ಕೋಶವನ್ನು ರಾಜ್ಯದ ಸಾಲ ಕ್ರೋಢೀಕರಣಕ್ಕೆ ಬೆಂಬಲ ಮತ್ತು ಸಲಹೆ ಸೇರಿದಂತೆ ಬಾಹ್ಯ ಸಾಲಗಳ ಅಗತ್ಯತೆಯ ವಿಶ್ಲೇಷಣೆಗೆ ಹಾಗೂ ನಿರ್ವಹಣೆಗೆ ಮೇ 2014 ರಲ್ಲಿ ರಚಿಸಲಾಯಿತು. ಈ ಕೋಶವು ವಿತ್ತೀಯ ಸುಧಾರಣೆಯ ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್‌ನ ನಿಕಟ ಸಂಪರ್ಕದಲ್ಲಿ ಹಾಗೂ ವಿಕಾಸಂ ನಿರ್ದೇಶಕರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೋಶದ ಮುಖ್ಯ ಕಾರ್ಯಚಟುವಟಿಕೆಗಳು ಕೆಳಕಾಣಿಸಿದಂತಿದೆ:

- ಯೋಜನಾ ನಿರ್ವಹಣೆ, ವರ್ಲ್ಡ್ ಬ್ಯಾಂಕ್‌ನ ಸಾಲ ಒಪ್ಪಂದ ಪತ್ರಗಳ, ಜೈಕಾ ಮತ್ತು ಎಡಿಬಿ ಸಹಾಯಾಧಾರಿತ ಚಾಲ್ತಿಯಲ್ಲಿರುವ ಯೋಜನೆಗಳ ಸಾಫ್ಟ್ ಕಾಪಿಗಳ ತಾಳೆ ನೋಡುವಿಕೆ
- ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ EAP ಯೋಜನೆಗಳ ದತ್ತಾಂಶಗಳನ್ನು ಸಾಲಗಳ ವಿತರಣೆ ಮತ್ತು ಮರುಪಾವತಿಯನ್ನು ಅದರ ಷರತ್ತು ಮತ್ತು ನಿಬಂಧನೆಯ ಜೊತೆಗೆ ಸಂಕಲಿಸಲಾಗಿದೆ.
- 17 EAP ಗಳ ಮಾಹಿತಿ ಕ್ರೋಢೀಕರಣ ಪೂರ್ಣಗೊಂಡಿರುತ್ತದೆ.
- ದಾನಿ ಸಂಸ್ಥೆಗಳ ವಾಸ್ತವಿಕ ವಿತರಣೆ ಹಾಗೂ ಮರುಪಾವತಿ ವೇಳಾಪಟ್ಟಿಯ ಮೂಲಕ ದತ್ತಾಂಶ ಮೌಲ್ಯೀಕರಣ ಮಾಡುವ ಪ್ರಯತ್ನಗಳು ಪೂರ್ಣಗೊಂಡಿವೆ.

2) ಆರ್ಥಿಕ ವಿಶ್ಲೇಷಣಾ ಕೋಶ (EAC):

ಈ ಕೋಶವನ್ನು ಆರ್ಥಿಕತೆಯ ಪ್ರವೃತ್ತಿ ಪರೀಕ್ಷಿಸಲು ಹಾಗೂ ವಿಶ್ಲೇಷಿಸಲು ಮತ್ತು ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ಜುಲೈ 2014 ರಲ್ಲಿ ಯೋಜನೆ ಮಾಹಿತಿ ತಂತ್ರಜ್ಞಾನ ಮತ್ತು ಸಾಂಖ್ಯಿಕ ಕೇಂದ್ರದಡಿ ರಚಿಸಲಾಯಿತು. ಕೋಶದ ಮುಖ್ಯ ಕಾರ್ಯಚಟುವಟಿಕೆಗಳು ಕೆಳಕಾಣಿಸಿದಂತಿದೆ:

- CMIE ದತ್ತಾಂಶವನ್ನು ಉಪಯೋಗಿಸಿ ಗುರುತಿಸಲಾದ 10 ದಿನಸಿ ಸರಕುಗಳ (ಭತ್ತ, ಗೋಧಿ, ರಾಗಿ, ಜೋಳ, ತೊಗರಿ ಬೇಳೆ, ಈರುಳ್ಳಿ, ಆಲೂಗೆಡ್ಡೆ, ಟೊಮೆಟೋ, ಶೇಂಗಾ ಮತ್ತು ಹತ್ತಿ) ದೈನಂದಿನ ಬೆಲೆ ಹಾಗೂ ಆವಕಗಳನ್ನು ಸಂಕಲಿಸಲಾಗಿದೆ.
- 'ಕರ್ನಾಟಕ ಮಾರುಕಟ್ಟೆಗಳಲ್ಲಿ ಈರುಳ್ಳಿ, ಆಲೂಗೆಡ್ಡೆ, ಟೊಮೆಟೋ, ರಾಗಿ ಮತ್ತು ಜೋಳದ ಆವಕ ಮತ್ತು ಬೆಲೆಗಳು– ಒಂದು ಅಧ್ಯಯನ' ದ ಬಗ್ಗೆ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರಿಗೆ ಒಂದು ವರದಿಯನ್ನು ಸಲ್ಲಿಸಲಾಗಿದೆ.

- EAC ದತಾಂತ್ಶಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ದತ್ತಾಂಶಗಳಿಗೆ ಸೇರಿಸುವ ಸಾಧ್ಯತೆ ಬಗ್ಗೆ ಆಯುಕ್ತರೊಂದಿಗೆ ಚರ್ಚೆ ನಡೆಸಲಾಯಿತು.
- ಅ) ಕರ್ನಾಟಕ ಕಬ್ಬಿಣ ಮತ್ತು ಉಕ್ಕಿನ ಬಳಕೆಯ ನಿರ್ಣಯ ಬ) ಈ ವಲಯದಿಂದ ಬಳಕೆಯ ಜೊತೆ ತೆರಿಗೆ ಸಂಗ್ರಹಣೆಯ ಹೋಲಿಕೆ ಕುರಿತು 'ಕರ್ನಾಟಕದಲ್ಲಿ ಕಬ್ಬಿಣ ಮತ್ತು ಉಕ್ಕಿನ ಸೆಕ್ಟರ್' ಬಗ್ಗೆ ಒಂದು ಅಧ್ಯಯನವನ್ನು ಆರಂಭಿಸಲಾಗಿದೆ.

3) ಲಿಂಗ ಆಯವ್ಯಯ ಕೋಶ (GBC)

ಈ ಕೋಶವನ್ನು 2007 ರಲ್ಲಿ ವಿತ್ತೀಯ ವಿಶ್ಲೇಷಣಾ ಕೋಶದಲ್ಲಿ ಆರಂಭಿಸಿದ್ದು ಪ್ರಸ್ತತ ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. 1) ಪ್ರತಿ ವರ್ಷವೂ ಸಂಸತ್ತಿನಲ್ಲಿ ಮಂಡನೆಯಾಗುವ ಲಿಂಗಾಧಾರಿತ ಆಯವ್ಯಯವನ್ನು ಇತರೆ ಆಯವ್ಯಯ ದಾಖಲೆಗಳೊಂದಿಗೆ ತಯಾರಿಸುವುದು 2) ಲಿಂಗಾಧಾರಿತ ಆಯವ್ಯಯಕ್ಕೆ ಸಾಮರ್ಥ್ಯವರ್ಧನೆ ಮಾಡುವುದು ಕೋಶದ ಮುಖ್ಯ ಕಾರ್ಯಚಟುವಟಿಕೆಗಳಾಗಿವೆ.

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, MWCD, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲಾಖೆಗಳ ಸಹಯೋಗದೊಂದಿಗೆ ರಾಜ್ಯ ಮಟ್ಟದಲ್ಲಿ ಇಲಾಖೆಗಳ ಸಾಮರ್ಥ್ಯವರ್ಧನೆಗೆ ಕ್ರಮ ತೆಗೆದುಕೊಳ್ಳುವುದು.
- 2015–16 ನೇ ಸಾಲಿನ ಲಿಂಗಾಧಾರಿತ ಆಯವ್ಯಯವನ್ನು ತಯಾರಿಸಲು ಪ್ರಾಥಮಿಕ ಚಟುವಟಿಕೆಯಾಗಿ ಆಗಸ್ಟ್ ನಿಂದ ನವಂಬರ್ 2014 ರವರೆಗೆ ಆರು ಹಂತಗಳಲ್ಲಿ 33 ವಿವಿಧ ಇಲಾಖೆಯ 190 ಅಧಿಕಾರಿಗಳಿಗೆ ಲಿಂಗ ದೃಷ್ಟಿಕೋನ ಕಮ್ಮಟಗಳನ್ನು ಅಯೋಜಿಸಲಾಗಿತ್ತು.

4) UN Women ಯೋಜನೆ:

- UN Women ರವರು ಈ ಯೋಜನೆಯನ್ನು ತಮ್ಮಪ್ಷಕ್ಕೆ ಜೂನ್ 2012 ರಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ವಹಿಸಿರುತ್ತಾರೆ.
- ಈ ಯೋಜನೆ ಉತ್ಪನ್ನಗಳು ಜೆಂಡರ್ ಆಡಿಟ್‌ನ ತರಬೇತಿ ವಸ್ತಗಳಾಗಿದ್ದು, ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸಾಮರ್ಥ್ಯ ಬಲವರ್ಧನೆಗೆ ಸಹಕಾರಿಯಾಗುತ್ತದೆ ಹಾಗೂ ತರಬೇತಿಗೆ ಉಪಯೋಗವಾಗುತ್ತದೆ.
- ಈ ಯೋಜನೆಯನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯ ಆಡಳಿತ ಪರಿಷತ್ತಿನಲ್ಲಿ ಮಂಡಿಸಿದ್ದು ಅನುಮೋದನೆ ಪಡೆಯಲಾಗಿದೆ. ಯೋಜನೆಗೆ ತಗಲುವ ಆಯವ್ಯಯವು ರೂ.12,56,650/– ಎಂದು ಲೆಕ್ಕ ಹಾಕಿದೆ.
- ಈ ಯೋಜನೆಯ ಸಂಪೂರ್ಣ ವೆಚ್ಚವನ್ನು UN Women ರವರೇ ಭರಿಸುತ್ತಿರುವುದರಿಂದ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಆರ್ಥಿಕ ಇಲಾಖೆಯು ಇಂತಹ ಪ್ರಾಯೋಜಿತ ಯೋಜನೆ ಆದಾಯವನ್ನು ನಿರ್ವಹಿಸಲು ಮಹಾಲೇಖಾಪಾಲರ ಅನುಮೋದನೆಯೊಂದಿಗೆ ಆಯವ್ಯಯ ಲೆಕ್ಕ ಶೀರ್ಷಿಕೆ (0070-60-800-3-02) ಅಡಿ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಉಳಿತಾಯ ಖಾತೆಯನ್ನು ತೆರೆದಿರುತ್ತದೆ.
- ಮಾಹಿತಿ ನೀಡುವ ಅಧಿಕಾರಿಗಳು ಲೋಕಸಭಾ ಚುನಾವಣೆಯಲ್ಲಿ ನಿರತರಾಗಿದ್ದರಿಂದ ಹಾಗೂ ಯೋಜನಾ ಸಿಬ್ಬಂದಿ 2014–15 ನೇ ಸಾಲಿನ ಆಯವ್ಯಯ ತಯಾರಿಕೆಯಲ್ಲಿ ತೊಡಗಿದ್ದರಿಂದ ಮಾಹಿತಿ ಸಂಗ್ರಹಣೆ ತಡವಾಧ ಕಾರಣ ಯೋಜನಾ ಅವಧಿಯನ್ನು ವಿಸ್ತರಿಸಬೇಕಾಯಿತು. ಪರಿಷ್ಕೃತ ವೇಳಾಪಟ್ಟಿಯಿಂದ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ.
- ಯೋಜನಾ ಪ್ರಗತಿಯನ್ನು ಪರಿಣಿತರ ತಂಡವು ಕಾಲ ಕಾಲಕ್ಕೆ ಪರಿಶೀಲಿಸುತ್ತಿದೆ ಮತ್ತು UN Women team ಸಹ ಆಗಸ್ಟ್ 2014 ರಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಭೇಟಿ ನೀಡಿ ಯೋಜನೆಯನ್ನು ಪರಿಶೀಲಿಸಿದೆ.
- UN Women ನಿಂದ ಹಣ ಬಿಡುಗಡೆಯಾಗುವುದು ನಿಧಾನವಾಗಿದ್ದು ಎರಡನೆ ಕಂತು 30ನೇ ಸೆಪ್ಟಂಬರ್ 2014 ರಂದು ಬಿಡುಗಡೆಯಾಗಿದೆ.

- ಯೋಜನಾ ವರದಿಯ ಕರಡನ್ನು ತಯಾರಿಸಲಾಗುತ್ತಿದೆ.

2.3 ಸಲಹೆಗಳ ಬಗ್ಗೆ:

(i) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ತಾತ್ರಿಕ ಸಮಿತಿ: ಒಂದು ಉಪ ಸಲಹೆಗಾರರನ್ನು ಮಾದರಿ ತಂತ್ರಗಾರಿಕೆ , ಮಾದರಿ ಗಾತ್ರಗಳು ಇತ್ಯಾದಿಗಳ ಒಳಹರಿವನ್ನು ನೀಡಲು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶಿಸಲಾಗಿದೆ.

(ii) ತರಬೇತಿ ಅಗತ್ಯತೆಗಳ ನಿರ್ಧರಣೆಯ (TNA) ಕಾರ್ಯಾಗಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆಗಾಗಿ ತರಬೇತಿ ಅಗತ್ಯತೆಗಳ ಬಗ್ಗೆ ನಿರ್ಧರಿಸಲು 26, 27 ನೇ ಆಗಸ್ಟ್ 2014 ರಂದು ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

(iii) ಮಾರ್ಚ್ ಮತ್ತು ಸೆಪ್ಟೆಂಬರ್ 2014 ರಲ್ಲಿ ಕ್ರೈಸ್ಟ್ ಯೂನಿವರ್ಸಿಟಿಯಿಚಿದ ಬಂದ ಆಹ್ವಾನದ ಮೇರೆಗೆ ನಿರ್ದೇಶಕರಿಂದ ಅನುಮೋದನೆ ಪಡೆದು ಡಾ.ಶ್ರೀಜಾ ಕರಾಲಮ್, ಬೋಧಕರು ಇವರ ಪ್ರಾಜೆಕ್ಟ್ "Effectiveness of the Ujjawala Scheme for the prevention of Trafficking, Rescue, Rehabilitation and Re-integration of victims of Trafficking in Karnataka" ನ ವರದಿಯನ್ನು ಮೌಲ್ಯ ಮಾಪನ ಮಾಡಿ ತಾಂತ್ರಿಕ ಅಂಶಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಕಾರ್ಯದಿಂದಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ರೂ.4000/–ಗಳ ವರಮಾನ ಬಂದಿರುತ್ತದೆ.

2.4 ಇತರೆ:

ತರಬೇತಿ ತಂತ್ರಾಂಶ ಸುರಕ್ಷತಾ ಆಡಿಟ್: ಮೇ 2014 ರಲ್ಲಿ ತರಬೇತಿ ತಂತ್ರಾಂಶದ ಸುರಕ್ಷತಾ ಆಡಿಟ್ ಪೂರ್ಣಗೊಂಡಿತು. ತರಬೇತಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಸೆರೆ ಹಿಡಿಯಲು ಆನ್‌ಲೈನ್‌ನಲ್ಲಿ ಪ್ರಶಿಕ್ಷಣಾರ್ಥಿಗಳ ಪ್ರತಿಕ್ರಿಯೆ ತಿಳಿಯಲು ಈ ತಂತ್ರಾಂಶವನ್ನು ಉಪಯೋಗಿಸಲಾಗುತ್ತಿದೆ.

**2.5 ಹಣಕಾಸು:**

ಎರಡು ಲೆಕ್ಕ ಶೀರ್ಷಿಕೆಗಳು ಇದ್ದು, ಒಂದು ವಿಕಾಸಂ ಮತ್ತು ಮತ್ತೊಂದು ವಿನೀವಿಕೋದ್ದಾಗಿರುತ್ತದೆ. ಈ ಪೈಕಿ ವಿಕಾಸಂಗೆ ಯೋಜನೆ ಹಾಗೂ ಯೋಜನೇತರ ಎರಡೂ ಶೀರ್ಷಿಕೆಗಳಲ್ಲಿ ಹಣ ಬಿಡುಗಡೆಯಾಗಿರುತ್ತದೆ ಮತ್ತು ವಿನೀವಿಕೋಗೆ ಯೋಜನೇತರ ಶೀರ್ಷಿಕೆಯಲ್ಲಿ ಮಾತ್ರವೇ ಹಣ ಹಂಚಿಕೆಯಾಗಿರುತ್ತದೆ. ವಿತ್ತೀಯ ನೀತಿ ವಿಶ್ಲೇಷಣಾ ಕೋಶವು ವಿತ್ತೀಯ ಕಾರ್ಯನೀತಿ ಸಂಸ್ಥೆಯೊಂದಿಲೆ ವಿಲೀನವಾಗಿರುವ ಕಾರಣ 2014–15 ನೇ ಸಾಲಿನಲ್ಲಿ ಹಣ ಬಿಡುಗಡೆಯಾಗಿರುವುದಿಲ್ಲ. 2014–15ನೇ ಸಾಲಿನಲ್ಲಿ ವಿಕಾಸಂ ಲೆಕ್ಕ ಶೀರ್ಷಿಕೆಗಳಿಗೆ ಹಂಚಿಕೆಯಾಗಿರುವ ಹಣಕಾಸು ವಿವರಗಳು ಈ ಕೆಳಕಂಡಂತಿವೆ:

(ಲಕ್ಷ ರೂ.ಗಳಲ್ಲಿ)

| ಲೆಕ್ಕಶೀರ್ಷಿಕೆ | ವಾಸ್ತವಿಕ/ಲೆಕ್ಕಗಳು 2012–13 | | ಆರ್‌ಇ 2013–14 | | ಬಿಇ 2014–15 | |
|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| | (1) | (2) | (3) | (4) | (5) | (6) |
| ವಿತ್ತೀಯ ಕಾರ್ಯನೀತಿ ಸಂಸ್ಥೆ (2052–00–090–0–12) | 134.31 | 28.27 | 171.62 | 634.00 | 89.29 | 1275.29 |
| ವಿತ್ತೀಯ ಕಾರ್ಯನೀತಿ ವಿಶ್ಲೇಷಣಾ ಕೋಶ (2054–00–0980–02) | –– | 175.70 | – | 381.88 | – | –– |
| **ಒಟ್ಟು** | **134.31** | **203.97** | **171.62** | **1015.88** | **89.29** | **1275.29** |

**2.6 ವೆಚ್ಚ:** (ಡಿಸೆಂಬರ್ 2014 ರವರೆಗೆ)

(ಲಕ್ಷ ರೂ.ಗಳಲ್ಲಿ)

| **ಲೆಕ್ಕಶೀರ್ಷಿಕೆ** | **ವಾಸ್ತವಿಕ/ಲೆಕ್ಕಗಳು 2012–13** | | **ಆಯವ್ಯಯ ಅಂದಾಜು 2014–15** | | **ಡಿಸೆಂಬರ್ 2014ರ ವರೆಗಿನ ವೆಚ್ಚಗಳು** | |
|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| | (1) | (2) | (3) | (4) | (5) | (6) |
| ವಿತ್ತೀಯ ಕಾರ್ಯನೀತಿ ಸಂಸ್ಥೆ (2052–00–090–0–12) | 134.31 | 28.27 | 89.29 | 1275.29 | 85.32 | 238.52 |
| ವಿತ್ತೀಯ ಕಾರ್ಯನೀತಿ ವಿಶ್ಲೇಷಣಾ ಕೋಶ (2054–00–098–0–02) | -- | 175.70 | -- | -- | -- | -- |
| **ಒಟ್ಟು** | **134.31** | **203.97** | **89.29** | **1275.29** | **85.32** | **238.52** |

## ಅಧ್ಯಾಯ– 3

**ಅನ್ವಯಿಸುವುದಿಲ್ಲ.**

**ಅಧ್ಯಾಯ–4**

4.1 ಮೊದಲ ಭಾಗ : ಇಲ್ಲ
4.2 ದ್ವಿತೀಯ ಭಾಗ : ಇಲ್ಲ

**4.3 ತೃತೀಯ ಭಾಗ:** ಇಲ್ಲ

**4.4 ನಾಲ್ಕನೇ ಭಾಗ:**

ವಿಕಾಸಂ ಯು ಪ್ರಕಟಿಸಿರುವ ವರದಿಗಳು:

1. CMIE ಅಂತರ್ಜಾಲ ತಾಣ, ಕೃಷಿ ಮಾರುಕಟ್ಟೆ ಇಲಾಖೆ ಹಾಗೂ ಬೋರ್ಡ್ ಮತ್ತು ಆನ್‌ಲೈನ್ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಇನ್‌ಫಾರ್ಮೇಷನ್ ಸಿಸ್ಟಂಗಳಿಂದ ಮಾಹಿತಿ ಪಡೆದು 10 ದಿನಸಿ ಪದಾರ್ಥಗಳ ಕರ್ನಾಟಕ ಮಾರುಕಟ್ಟೆಯಲ್ಲಿನ ಆವಕಗಳ ಬೆಲೆ ಚಲನೆಗಳನ್ನು ನಿರ್ವಹಿಸಿ ಮಾಸಿಕ ವರದಿ ನೀಡಲಾಗುತ್ತಿದೆ.
2. ಸಾಂಖ್ಯಿಕ ಇಲಾಖೆ ಅಧಿಕಾರಿಗಳಿಗೆ ತರಬೇತಿ ಅಗತ್ಯತೆಗಳ ವಿಶ್ಲೇಷಣೆ ಬಗ್ಗೆ ವರದಿ.
3. ದಿನಾಂಕ 01/03/2014 ರಂದು ನಡೆದ "Various interest regime being offered by international lending agencies of Forex risks involved in back to back finances for EAPs" ಕುರಿತು ಒಂದು ವರದಿ.

**ಅಧ್ಯಾಯ–5**

**5 ಆಡಳಿತಾತ್ಮಕ ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿನ ಸಾಧನೆಗಳು**

**5.1. ಮಾನವ ಸಂಪನ್ಮೂಲ.**

ಎ) ಸಿಬ್ಬಂದಿ ಬಲ ಮತ್ತು ಖಾಲಿ ಹುದ್ದೆಗಳನ್ನು ತೋರಿಸುವ ತ:ಖ್ತೆ

| ಹುದ್ದೆಗಳು | ವೃಂದ | ಮಂಜೂರಾದ ಹುದ್ದೆಗಳು | ಕಾರ್ಯಬಲ | ಖಾಲಿ |
|---|---|---|---|---|
| ವಿತ್ತೀಯ ಕಾರ್ಯನೀತಿ ಸಂಸ್ಥೆ | | | | |
| ನಿರ್ದೇಶಕರು | ಎ | 1 | ಪ್ರಭಾರೆ | 1 |
| ಜಂಟಿ ನಿರ್ದೇಶಕರು | ಎ | 1 | 1 | 0 |
| ಭೋದಕರು | ಎ | 15 | 4 | 11 |
| ಮುಖ್ಯ ಲೆಕ್ಕಾಧಿಕಾರಿಗಳು | ಎ | 1 | 1 | 0 |
| ವಿಶೇಷಾಧಿಕಾರಿ | ವೇತನ ಶ್ರೇಣಿ ರಹಿತ | 18* | 16 | 2 |
| ಲೆಕ್ಕ ಪತ್ರ ಅಧೀಕ್ಷಕರು | ಬಿ | 1 | 1 | 0 |
| ಗ್ರಂಥಪಾಲಕರು | ಸಿ | 1 | ಓಓಡಿ | 1 |
| ಸಹಾಯಕ ಗ್ರಂಥಪಾಲಕರು | ಸಿ | 1 | 0 | 1 |
| ಸಹಾಯಕ ಸಾಂಖ್ಯಿಕ ಅಧಿಕಾರಿ | ಸಿ | 2 | 0 | 2 |
| ಪ್ರೋಗ್ರ್ಯಾಮರ್ | ಸಿ | 2 | 0 | 2 |
| ದತ್ತಾಂಶ ನಮೂದುಗಾರರು | ಸಿ | 2 | 0 | 2 |
| ಪ್ರಥಮ ದರ್ಜೆ ಲೆಕ್ಕ ಸಹಾಯಕ | ಸಿ | 1 | 0 | 1 |
| ಪ್ರಥಮ ದರ್ಜೆ ಸಹಾಯಕರು | ಸಿ | 1 | 0 | 1 |
| ಸ್ಟೆನೋ ಗ್ರಾಫರ್ | ಸಿ | 8 | 1 | 7 |
| ದ್ವಿತೀಯ ದರ್ಜೆ ಲೆಕ್ಕ ಸಹಾಯಕರು | ಸಿ | 1 | 1 | 0 |
| ದ್ವಿತಿಯ ದರ್ಜೆ ಸಹಾಯಕರು | ಸಿ | 1 | 1 | 0 |
| ದಲಾಯತ್ | ಡಿ | 12 | 0 | 12 |
| ಒಟ್ಟು | | 69 | 26 | 43 |

- 5 ವಿಶೇಷಾಧಿಕಾರಿ ಹುದ್ದೆಗಳನ್ನು ಸಂಶೋಧನಾ ಸಲಹೆಗಾರರ ಹುದ್ದೆಗಳನ್ನಾಗಿ ಪರಿವರ್ತಿಸಿದ್ದು, ವರದಿ ಮಾಡಿದ ಸಾಲಿನಲ್ಲಿ 5 ಸಂಶೋಧನಾ ಸಲಹೆಗಾರರು ಕಾರ್ಯನಿರ್ವಹಿಸುತ್ತಿರುತ್ತಾರೆ.

ಬಿ) ವೃಂದಾವಾರು ಸಿಬ್ಬಂದಿ ಬಲ ಮತ್ತು ಖಾಲಿ ಹುದ್ದೆಗಳನ್ನು ತೋರಿಸುವ ತ:ಖ್ತೆ

| ಕ್ರ. ಸಂ. | ವೃಂದ | ಮಂಜೂರಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಕಾರ್ಯಬಲ | | |
|---|---|---|---|---|---|---|
| | | | | ಪುರುಷ | ಮಹಿಳೆ | ಒಟ್ಟು |
| 1 | ಎ | 18 | 12 | 2 | 4 | 6 |
| 2 | ಬಿ | 1 | – | 1 | – | 1 |
| 3 | ಸಿ | 20 | 17 | 2 | 2 | 3 |
| 4 | ಡಿ | 12 | 12 | – | – | – |
| 5 | ವಿನೀವಿಕೋ (ವೇತನ ಶ್ರೇಣಿ ರಹಿತ) | 18 | 2 | 11 | 4 | 16 |
| | **ಒಟ್ಟು** | **69** | **43** | **16** | **10** | **26** |

ಸಿ) ಪುರುಷ, ಮಹಿಳಾ, ಮತ್ತು ಪ.ಜಾ/ಪ.ಪಂ ದ ಸಂಖ್ಯಾಬಲ ತೋರಿಸುವ ತ:ಖ್ತೆ

| ಕ್ರ. ಸಂ | ವೃಂದ | ಪುರುಷ | | | ಮಹಿಳೆ | | | ಒಟ್ಟು |
|---|---|---|---|---|---|---|---|---|
| | | SC | ST | Other | SC | ST | Other | |
| 1 | ಎ | – | – | 2 | 1 | | 3 | 6 |
| 2 | ಬಿ | – | – | 1 | – | – | – | 1 |
| 3 | ಸಿ | 1 | | 1 | | | 1 | 3 |
| 4 | ಡಿ | – | | | | | – | – |
| 5 | ವಿನೀವಿಕೋ (ವೇತನ ಶ್ರೇಣಿ ರಹಿತ) | 3 | | 8 | | | 5 | 16 |
| | ಒಟ್ಟು | 4 | – | 12 | 1 | – | 9 | 26 |

**5.2 ಖಾಲಿ ಹುದ್ದೆಗಳು ಮತ್ತು ನಿವೃತ್ತಿಗಳು:**

ವಿಕಾಸಂನಲ್ಲಿ 43 ಹುದ್ದೆಗಳು ಖಾಲಿ ಇವೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ 31/03/2014 ರಿಂದ ಜಾರಿಗೆ ಬರುವಂತೆ ಸ್ವ ಇಚ್ಚಾ ನಿವೃತ್ತಿ ಹೊಂದಿರುತ್ತಾರೆ. 2015 ನೇ ಸಾಲಿನಲ್ಲಿ ನಿವೃತ್ತಿ ಹೊಂದಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಇರುವುದಿಲ್ಲ.

**5.3 ಹೊರಗುತ್ತಿಗೆ ಸಿಬ್ಬಂದಿ:**

ಕೆಳಕಾಣಿಸಿದ ಸಿಬ್ಬಂದಿಯನ್ನು ಹೊರಗುತ್ತಿಗೆ /ಒಪ್ಪಂದದ ಆಧಾರದ ಮೇಲೆ ನೇಮಿಸಲಾಗಿದೆ.

| ಕ್ರ. ಸಂ | ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
|---|---|---|
| 1 | ಸಮಾಲೋಚಕರು | 1 |
| 2 | ಆಪ್ತ ಸಹಾಯಕರು | 7 |
| 3 | ದತ್ತಾಂಶ ನಮೂದುಗಾರು | 13 |
| 4 | ವಾಹನ ಚಾಲಕರು | 5 |
| 5 | ತಾಂತಿಕ ಸಹಾಯಕರು | 1 |
| 6 | ಸ್ವಾಗತಕಾರರು | 2 |
| 7 | ಸಮ್ಮೇಳನಾ ಆಯೋಜಕರು | 1 |
| 8 | ಕಛೇರಿ ಸಹಾಯಕರು | 1 |
| 9 | ದಲಾಯತ್ | 6 |
| 10 | ಮಾಲಿಗಳು | 3 |

**5.4 ಅಧಿಕಾರಿಗಳು ಭಾಗವಹಿಸಿದ ತರಬೇತಿಗಳು:**

ಅ) ಭಾಗವಹಿಸಿದ ಕೆಲವು ತರಬೇತಿ / ಕಾರ್ಯಕ್ರಮಗಳು / ಘಟನೆಗಳು.

1. ಇಬ್ಬರು ಅಧಿಕಾರಿಗಳು ಮೈಸೂರಿನ ಎಟಿಐನಲ್ಲಿ ಆಯೋಜಿಸಿದ್ದ "ಪ್ರತ್ಯಕ್ಷ ತರಬೇತುದಾರರ ಕೌಶಲ್ಯಗಳ ತರಬೇತಿ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
2. ಮೂರು ಅಧಿಕಾರಿಗಳು ಮೈಸೂರಿನ ಎಟಿಐನಲ್ಲಿ ಆಯೋಜಿಸಿದ್ದ "ತರಬೇತಿ ಅಗತ್ಯತೆಗಳ ವಿಶ್ಲೇಷಣೆ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
3. ಒಬ್ಬ ಉಪ ಸಲಹೆಗಾರರು ವಿಕಾಸಂನಲ್ಲಿ ನಡೆದ "Service Tax- Concepts and Procedures" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
4. ಜಂಟಿ ನಿರ್ದೇಶಕರು (ಆಡಳಿತ) ಇವರು ದಿನಾಂಕ 14/07/2014 ರಿಂದ 26/07/2014 ರವರೆಗೆ ಹೈದರಾಬಾದ್ ನ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಎಂಟರ್‌ಪ್ರೈಸ್ ನವರು ಆಯೋಜಿಸಿದ್ದ "ವಾಣಿಜ್ಯ ಲೆಕ್ಕ ಹಾಗೂ ಆರ್ಥಿಕ ನಿರ್ವಹಣೆ" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
5. ಮುಖ್ಯ ಲೆಕ್ಕಾಧಿಕಾರಿಗಳು ಐಎಫ್‌ಎಂಆರ್, ಚೆನ್ನೈ ನಲ್ಲಿ ದಿನಾಂಕ 04/08/2014 ರಿಂದ 16/08/2014 ರವರೆಗೆ ನಡೆದ "ಆರ್ಥಿಕ ನಿರ್ವಹಣೆ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
6. ಒಬ್ಬ ಉಪ ಸಲಹೆಗಾರರು ಮುಂಬೈನಲ್ಲಿ ದಿನಾಂಕ 06/08/2014 ಮತ್ತು 07/08/2014 ರಂದು ಆಯೋಜಿಸಿದ್ದ ಎರಡು ದಿನಗಳ 'Making an Impact with IDEA' 3ನೇ IDEA software ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
7. ಇಬ್ಬರು ಅಧಿಕಾರಿಗಳು ದಿನಾಂಕ 15/09/2014 ರಿಂದ 17/09/2014 ರವರೆಗೆ ಹೋಟೆಲ್ ಏಟ್ರಿಯಾದಲ್ಲಿ ನಡೆದ ಮೂರು ದಿನಗಳ 'e-Governance Project Lifecycle' ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
8. ಒಬ್ಬ ಅಧಿಕಾರಿಯು ವಿತ್ತೀಯ ಕಾರ್ಯನೀತಿ ಸಂಸ್ಥೆಯು ದಿನಾಂಕ 13/10/2014 ರಿಂದ 15/10/2014 ರವರೆಗೆ ನಡೆಸಿದ ಪಿಂಚಣಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
9. ಇಬ್ಬರು ಅಧಿಕಾರಿಗಳು 21/11/2014 ರಂದು ನಡೆದ 'Statistics for Research & Analysis using SPSS' ಬೋಧನ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
10. ಒಬ್ಬ ಅಧಿಕಾರಿಯು ದಿನಾಂಕ 01/12/2014 ರಿಂದ 06/12/2014 ರವರೆಗೆ ಕರಾಲೆಪ ಇಲಾಖೆಯ ಅಧಿಕಾರಿಗಳಿಗೆ ನಡೆಸಿದ 6 ದಿನಗಳ ಮಾಹಿತಿ ತಂತ್ರಜ್ಞಾನ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು
11. ಒಬ್ಬ ಉಪ ಸಲಹೆಗಾರರು ಎಂಎಸ್‌ಎಂಇ ರವರು ದಿನಾಂಕ 27/12/2014 ರಿಂದ 30/12/2014 ರವರೆಗೆ ಬೆಂಗಳೂರಿನಲ್ಲಿ ನಡೆಸಿದ "ಸಿಕ್ಸ್ ಸಿಗ್ಮ" ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬ) ಅಧಿಕಾರಿಯು ಭಾಗವಹಿಸಿದ ರಾಜ್ಯದೊಳಗಿನ ಮತ್ತು ಹೊರಗಿನ ತರಬೇತಿಗಳು:

1. ಒಬ್ಬ ಅಧಿಕಾರಿಯು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ 'Budget making process in State/Centre' ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 17/03/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
2. ಒಬ್ಬ ಅಧಿಕಾರಿಯು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ 'Presentation on GB by five groups' and 'Gender Mainstreaming & Challenges & Limitation of Gender Budget' in the training programme 'Gender Sensitive Budget - Issues and Perspectives' ಕುರಿತ ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 07/06/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
3. ಒಬ್ಬ ಅಧಿಕಾರಿಯು IIM, ಲಕ್ನೋ ಸಂಸ್ಥೆಯು ಆಯೋಜಿಸಿದ್ದ 'Gender Budgeting' ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 28/07/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
4. ಒಬ್ಬ ಆದಿಕಾರಿಯು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ 'Gender and Budget' and 'Five Steps analysis and related case studies' ಕುರಿತ ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 25/08/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
5. ಒಬ್ಬ ಅಧಿಕಾರಿಯು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ 'Gender and Budgeting; Current practices' ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 28/08/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
6. ಒಬ್ಬ ಅಧಿಕಾರಿಯು NIPCCD ಸಂಸ್ಥೆಯು 'ಆಡಿಟ್ ಪ್ರೊಸೀಜರ್ಸ್' ಬಗ್ಗೆ ಆಯೋಜಿಸಿದ ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 24/09/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.
7. ಒಬ್ಬ ಅಧಿಕಾರಿಯು NIRD & PR, ಹೈದರಾಬಾದ್ ಸಂಸ್ಥೆಯು ಆಯೋಜಿಸಿದ 'Gender and Budgeting' ತರಬೇತಿ ಕಾರ್ಯಕ್ರಮದಲ್ಲಿ ದಿನಾಂಕ 12/11/2014 ರಂದು ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದರು.

**5.5 ತಂತ್ರಾಂಶ:** ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸಿಬ್ಬಂದಿಯ ಹಾಜರಾತಿಯನ್ನು ದಾಖಲಿಸಲು ಕಚೇರಿಯಲ್ಲಿ ಬಯೋಮೆಟ್ರಿಕ್ ಉಪಕರಣಗಳನ್ನು ಅಳವಡಿಸಲಾಗಿದೆ.

5.6 **ಆಡಳಿತ ತಪಾಸಣೆ:**
ಅನ್ವಯಿಸುವುದಿಲ್ಲ.

## ಅಧ್ಯಾಯ-6

**6.1 ವಿಧಾನ ಸಭೆ/ ವಿಧಾನ ಪರಿಷತ್ತು ಪ್ರಶ್ನೆಗಳು:**

ವಿತ್ತೀಯ ಕಾರ್ಯನೀತಿ ಸಂಸ್ಥೆಯು ವರದಿಯ ಸಾಲಿನಲ್ಲಿ 2 ಲೋಕ ಸಭೆ, 45 ವಿಧಾನ ಸಭೆ ಮತ್ತು 28 ವಿಧಾನ ಪರಿಷತ್ತಿನ ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲಾಗಿದೆ.

**6.2 ಮೊಕದ್ದಮೆಗಳು:**

ಇಲ್ಲ.

**6.3 ಲೆಕ್ಕ ಪರಿಶೋಧನೆ:**

ಪ್ರಸ್ತುತ ಕೆಳಕಾಣಿಸಿದಂತೆ ಆಡಿಟ್ ಪ್ಯಾರಾಗಳು ಬಾಕಿ ಉಳಿದಿವೆ.

| ವರ್ಷ | ಪ್ಯಾರಾಗಳ ಸಂಖ್ಯೆ |
|---|---|
| 2009-11 | 3 |
| 2011-12 | 5 |
| 2012-13 | 15 |
| **ಒಟ್ಟು** | **23** |

ಜಂಟಿ ನಿರ್ದೇಶಕರು (ಆಡಳಿತ)(ಪ್ರ)
ವಿತ್ತೀಯ ಕಾರ್ಯನೀತಿ ಸಂಸ್ಥೆ
ಬೆಂಗಳೂರು.